# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 22–02–2022 ರಂದು ಸಮಯ 12.00 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

1. ಶ್ರೀಮತಿ ಉಮಾದೇವಿ ಬಳಿಗಾರ್, ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಆನಂದ್.ಜಿ, ಸಹಾಯಕ ಅಭಿಯಂತರರು ವಾ.ನಂ.–155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) – ಸದಸ್ಯರು
4. ಶ್ರೀ.ರಾಮಚಂದ್ರ (ಕಿ.ಅ–155) ಬೆಸ್ಕಾಂ
5. ಶ್ರೀ.ಸಿ.ಬಾಲಕೃಷ್ಣ (ಕ.ಮೌಲ್ಯಮಾಪಕರು)
6. ಶ್ರೀ.ಆರ್.ವಿಜಯ್‌ಕೃಷ್ಣ(ಕ.ಪ)
7. ಶ್ರೀಮತಿ.ಜ್ಯೋತಿ (ಟಿ.ಇ.)
8. ಶ್ರೀ.ಸ್ವಾಮಿಗೌಡ – ತೋಟಗಾರಿಕೆ
9. ಶ್ರೀ.ಎಲ್.ಕುಮಾರ್– ಸಾರ್ವಜನಿಕರು.
10. ಶ್ರೀ ಪಿಳ್ಳಪ್ಪ – ಸಾರ್ವಜನಿಕರು.
11. ಶ್ರೀ ಎಂ. ಚಂದ್ರಶೇಖರ್– ಸಾರ್ವಜನಿಕರು.
12. ಶ್ರೀ ಸುರೇಶ್ ಕುಮಾರ್ – ಸಾರ್ವಜನಿಕರು.
13. ಶ್ರೀ.ಜಯರಾಮ್ .ಡಿ– ಸಾರ್ವಜನಿಕರು.
14. ಶ್ರೀ.ಸಿ.ಉಮೇಶ್ – ಸಾರ್ವಜನಿಕರು.
15. ಶ್ರೀಮತಿ ದೇವಕಿ– ಸಾರ್ವಜನಿಕರು.
16. ಶ್ರೀಮತಿ ಗಿರಿಜಾಂಬ – ಸಾರ್ವಜನಿಕರು.
17. ಶ್ರೀಮತಿ.ಲಕ್ಷ್ಮೀಗೌಡ – ಸಾರ್ವಜನಿಕರು.
18. ಶ್ರೀಮತಿ.ಗೌರಮ್ಮ – ಸಾರ್ವಜನಿಕರು.
19. ಶ್ರೀಮತಿ ಆರ್.ಪದ್ಮ – ಸಾರ್ವಜನಿಕರು.

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 155ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ನೆರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ನೋಡಲ್ ಅಧಿಕಾರಿಗಳು ಮಾತನಾಡಿ ಹನುಮಂತನಗರ ವಾರ್ಡ್ ವ್ಯಾಪ್ತಿಯಲ್ಲಿರುವ ಬೆಸ್ಕಾಂ ಕೇಬಲ್‌ಗಳಿಗೆ ಅಡ್ಡ ಬರುವಂತಹ ರಂಬೆಗಳನ್ನು ಕತ್ತರಿಸಲು ಕ್ರಮವಹಿಸಲು ಸೂಚಿಸಲಾಗಿದೆ.

ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–155 ಬೆಸ್ಕಾಂ ರವರಿಗೆ
ಕ್ರಮ ವಹಿಸಲು ಸೂಚಿಸಿರುತ್ತಾರೆ.

>>>>2

Scanned by Scanner Go

ಲಕ್ಷ್ಮೀಪುರ ಸುತ್ತಮುತ್ತ ಪ್ರದೇಶಗಳಲ್ಲಿ ಬೋರ್‌ವೆಲ್ ರಿಪೇರಿ ಹಾಗೂ ಪೈಪ್‌ಲೈನ್‌ಗಳನ್ನು ಹಾಕಿಕೊಂಡುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–155 ರವರಿಗೆ
ಕ್ರಮ ವಹಿಸಲು ಸೂಚಿಸಿರುತ್ತಾರೆ.

ಕಾವೇರಿ ನದಿ ರಸ್ತೆ, ಗೋದಾವರಿ ನದಿ ರಸ್ತೆ, ಗಂಗಾ ನದಿ ರಸ್ತೆ, ಕವಿ ರನ್ನ ರಸ್ತೆ ಹಾಗೂ ಕವಿ ಜನ್ನ ರಸ್ತೆಯಲ್ಲಿ ಕುಡಿಯುವ ನೀರು ಸರಿಯಾಗಿ ಬರುತ್ತಿಲ್ಲ ಆದ್ದರಿಂದ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–155
ಬಿ.ಡಬ್ಲ್ಯು.ಎಸ್.ಎಸ್.ಬಿ ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

4ನೇ ಅಡ್ಡರಸ್ತೆ ಹಾಗೂ 14ನೇ ಮುಖ್ಯ ರಸ್ತೆಯಲ್ಲಿ ರಸ್ತೆ ಅಗೆದಿರುವ ಭಾಗಕ್ಕೆ ಡಾಂಬರೀಕರಣ ಮಾಡಿಕೊಂಡುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಕಾರ್ಯಪಾಲಕ ಅಭಿಯಂತರರು (ಆರ್.ಐ–ದಕ್ಷಿಣ) ರವರಿಗೆ
ಕ್ರಮ ವಹಿಸಲು ಕೋರಲಾಗಿರುತ್ತದೆ.

ಹನುಮಂತನಗರ ವಾರ್ಡ್ ವ್ಯಾಪ್ತಿಯಲ್ಲಿರುವ ಎ.ಕೆ.ಕಾಲೋನಿಯಲ್ಲಿ ಮ್ಯಾನ್‌ಹೋಲ್‌ನ್ನು ಸರಿಪಡಿಸಿಕೊಂಡುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: – ಸಹಾಯಕ ಅಭಿಯಂತರರು ವಾರ್ಡ್–155
ಬಿ.ಡಬ್ಲ್ಯು.ಎಸ್.ಎಸ್.ಬಿ ರವರಿಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ.

ಶ್ರೀ.ಗವಿಗಂಗಾಧರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಹಾಗು ಇತರೆಡೆಗಳಲ್ಲಿ ಸುಮಾರು ದಿನಗಳಿಂದ ನಿಂತಿರುವ ಹಳೆಯ ಗಾಡಿಗಳು ನಿಂತಿರುವುದರಿಂದ ರಸ್ತೆಯ ಶುಚಿತ್ವ ಹಾಳಾಗಿರುತ್ತದೆ. ಆದ್ದರಿಂದ ಹಳೆಯ ಗಾಡಿಗಳನ್ನು ತೆರವುಗೊಳಿಸುವಂತೆ ಹಾಗೂ ಸದರಿ ಜಾಗದಲ್ಲಿ ನೋ ಪಾರ್ಕಿಂಗ್ ಬೋರ್ಡ್‌ಗಳನ್ನು ಅಳವಡಿಸುವಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಕೋರಿದರು.

ಕ್ರಮ: ಠಾಣಾಧಿಕಾರಿಗಳು ಬಸವನಗಡಿ ಸಂಚಾರಿ ಪೋಲೀಸ್ ಠಾಣೆ
ರವರಿಗೆ ಕ್ರಮಕೈಗೊಳ್ಳಲು ಕೋರಲಾಗಿರುತ್ತದೆ.

>>>>3

Scanned by Scanner Go

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೆಯ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ, ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

22/2/22

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-155 ಹನುಮಂತನಗರ

ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-155 ಹನುಮಂತನಗರ

ಪ್ರತಿಯನ್ನು:-

1. ಮಾನ್ಯ ಮುಖ್ಯ ಆಯುಕ್ತರು, ಬೃಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ಮತ್ತು ವಲಯ ಆಯುಕ್ತರು(ದ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು (ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ.
6. ಮಾನ್ಯ ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ,
7. ಕಾರ್ಯಪಾಲಕ ಅಭಿಯಂತರರು (ಬಸವನಗುಡಿ) /ಸ.ಕಾ.ನಿ.ಅ (ಬ.ಗು) ಉಪವಿಭಾಗ ರವರ ಅವಗಾಹನೆಗೆ.
8. ಆರೋಗ್ಯ ವೈದ್ಯಾಧಿಕಾರಿಗಳು, ಬಸವನಗುಡಿ ವಿಭಾಗ ರವರ ಅವಗಾಹನೆಗೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಹನುಮಂತನಗರ ರವರ ಅವಗಾಹನೆಗೆ.
10. ಪೋಲೀಸ್ ಇನ್ಸ್‌ಪೆಕ್ಟರ್, ಕಾನೂನು ಸುವ್ಯವಸ್ಥೆ ಹನುಮಂತನಗರ/ಕೆಂಪೇಗೌಡನಗರ ಪೋಲೀಸ್ ಠಾಣೆ ರವರ ಅವಗಾಹನೆಗೆ.
11. ಪೋಲೀಸ್ ಇನ್ಸ್‌ಪೆಕ್ಟರ್, ಬಸವನಗುಡಿ ಸಂಚಾರಿ ಪೋಲೀಸ್ ಠಾಣೆ ರವರ ಅವಗಾಹನೆಗೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಎಂ.ಎನ್.ಕೆ ಪಾರ್ಕ್, ಬಸವನಗುಡಿ ರವರ ಅವಗಾಹನೆಗೆ.
13. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.
14. ಕಛೇರಿ ಕಡತಕ್ಕೆ.

Scanned by Scanner Go